ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

ಸಂಖ್ಯೆ:ರಿರ್‍ಯಾನಿಮೇಸ/ಕೊಡಗು/ಪ್ರಕಟಣೆ2018-19

ದಿನಾಂಕ:14-11-2018

## ಪತ್ರಿಕಾ ಪ್ರಕಟಣೆ

ಕೊಡಗು ಜಿಲ್ಲೆಯಲ್ಲಿ ರಿವರ್ ರ್‍ಯಾಫ್ಟಿಂಗ್ ನಡೆಸುವ ವಿಚಾರವಾಗಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ನ್ಯಾಯಲಯದ ಆದೇಶದಲ್ಲಿನ ಅಂಶಗಳಂತೆ ಜಿಲ್ಲಾ ಮಟ್ಟದ 'ರಿವರ್ ರ್‍ಯಾಫ್ಟಿಂಗ್ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ'ಯನ್ನು ರಚಿಸಲಾಗಿದ್ದು, ದಿನಾಂಕ:29-10-2018ರಂದು ನಡೆದ 'ರಿವರ್ ರ್‍ಯಾಫ್ಟಿಂಗ್ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ' ಸಭೆಯ ನಿರ್ಣಯದಂತೆ ಸೋಮವಾರಪೇಟೆ ತಾಲ್ಲೂಕು ನಂಜರಾಯಪಟ್ಟಣ ಗ್ರಾಮಪಂಚಾಯತಿ ವ್ಯಾಪ್ತಿಯ ದುಬಾರೆ ಪ್ರದೇಶದ ಕಾವೇರಿ ನದಿಯಲ್ಲಿ ರಿವರ್ ರ್‍ಯಾಫ್ಟಿಂಗ್ ನಡೆಸಲು ಪರವಾನಗಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು, ರ್‍ಯಾಫ್ಟಿಂಗ್ ನಡೆಸಲು ಸಮಿತಿಯು ನಿಗಧಿಪಡಿಸಿರುವ ಮಾರ್ಗಸೂಚಿಗಳು ಹಾಗೂ ನಿಬಂಧನೆಗಳ ವಿವರಗಳನ್ನು **http://www.kodagu.nic.in**ನಲ್ಲಿ ಪ್ರಕಟಿಸಲಾಗಿರುತ್ತದೆ. ಆಸಕ್ತರು ಅರ್ಜಿಯನ್ನು ವೆಬ್‌ಸೈಟ್‌ನಿಂದ ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾದ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಸ್ಟಿವರ್ಟ್ ಹಿಲ್, ಮಡಿಕೇರಿ ಇವರಿಗೆ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಕೊಡಗು ಜಿಲ್ಲಾ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ 08272-228580ನ್ನು ಸಂಪರ್ಕಿಸಬಹುದಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ರಿವರ್ ರ್‍ಯಾಫ್ಟಿಂಗ್ ನಿರ್ವಹಣೆ ಮತ್ತು ಮೇಲುಸ್ತುವಾರಿ ಸಮಿತಿ
ಮಡಿಕೇರಿ, ಕೊಡಗು ಜಿಲ್ಲೆ.

ಪ್ರತಿಯನ್ನು:

ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಮಡಿಕೇರಿ ಇವರಿಗೆ ಕಳುಹಿಸುತ್ತಾ, ಸ್ಥಳೀಯ ಸುದ್ದಿ ಮಾಧ್ಯಮ ಮತ್ತು ಜಿಲ್ಲಾ ಮತ್ತು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಸುದ್ದಿರೂಪದಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.